2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ

ಸಿ.ಸಿ. 713/2023

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.04**

**ದಿನಾಂಕಃ** 04.04.2026

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಆಸ್ತಿ ಸಂಖ್ಯೆ 184 ಖಾತಾ ಸಂಖ್ಯೆ 245 ಸೈಟು ನನ್ನ ಆಸ್ತಿ ಎಂದು ತೋರಿಸಲು ಪೊಲೀಸರಿಗೆ ಅದಕ್ಕೆ ಸಂಬಂದಿಸಿದ ನೋಂದಾಯಿತ ದಾಖಲೆ ನೀಡಿದ್ದೇನೆ. ಆರೋಪಿತರು ಮಠದ ಮನೆತನದವರು ಎಂದರೆ ಸರಿ. ಆರೋಪಿತರು ನಾವು ನಮ್ಮ ಮುತ್ತಾತನ ಕಾಲದ ರಕ್ತ ಸಂಬಂದಿಕರು. ನಮ್ಮ ಮತ್ತು ಆರೋಪಿತರ ನಡುವೆ ಜಮೀನು ಹಾಗೂ ಸೈಟಿನ ವಿಚಾರವಾಗಿ 2 ಸಿವಿಲ್ ದಾವೆಗಳು ನಡೆದಿವೆ. ನಿಪಿ.10 ರಲ್ಲಿನ ಆಸ್ತಿ ನನಗೆ 16-17 ವರ್ಷಗಳ ಹಿಂದೆ ಬಂದಿದೆ. ನಿಪಿ.10 ರಂತೆ ಖಾತೆಯಾಗುವ ಪೂರ್ವದಲ್ಲಿ ಸದರಿ ಆಸ್ತಿ ಯಾರ ಹೆಸರಿಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿ ಮಠದ ವಂಶಸ್ಥರ ಹೆಸರಿಗೆ ಇದ್ದುದರಿಂದ ನಾನು ಅದನ್ನು ಪ್ರಶ್ನಿಸಿ ಡಿಸಿ ನ್ಯಾಯಾಲಯದಲ್ಲಿ ಒಂದು ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ನೀವು ಈ ರೀತಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಸದರಿ ಆಸ್ತಿ ಯಾರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ರಾಜಣ್ಣನವರ ತಂದೆ ಹೆಸರಿಗೆ ಇತ್ತು ಸದರಿಯವರ ತಂದೆ ಹೆಸರಿಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ಘಟನಾ ದಿನ ನಾನು ಸೀರೆಯನ್ನು ಉಟ್ಟಿರಲಿಲ್ಲ. ''ನಿಮ್ಮ ಹೇಳಿಕೆಯಲ್ಲಿ ನನ್ನ ಹೆಂಡತಿಯ ಮಾನಕ್ಕೆ ಧಕ್ಕೆ ಬರುವಂತೆ ನನ್ನ ಸೀರೆ ಹಿಡಿದು ಎಳೆದಾಡಿದರು'' ಎಂದು ಹೇಳಿದ್ದೀರಾ ಎಂದರೆ ಸಾಕ್ಷಿಯು ನನ್ನ ಹೆಂಡತಿ ಸೀರೆ ಹಿಡಿದು ಎಳೆದಾಡಿದರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.1 ನ್ನು ದಾಖಲಿಸುವ ಕಾಲಕ್ಕೆ ನಾನು ನನ್ನ ಹೆಂಡತಿ ಚಾಸಾ.1 ರವರೊಂದಿಗೆ ಠಾಣೆಗೆ ಹೋಗಿದ್ದೆ. ಘಟನೆ ನಡೆದಾಗ ಚಾಸಾ.1 ರವರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿ. ಘಟನೆ ನಡೆದ ಎಷ್ಟು ಸಮಯದ ನಂತರ ಚಾಸಾ.1 ಸ್ಥಳಕ್ಕೆ ಬಂದರು ಎಂದರೆ ಸಾಕ್ಷಿಯು ಚಾಸಾ.1 ರವರು ಘಟನೆ ಪ್ರಾರಂಭವಾದ 15 ನಿಮಿಷಗಳ ನಂತರ ಇನ್ನು ಘಟನೆ ನಡೆಯುತ್ತಿರುವಾಗ ಬಂದರು. ಘಟನೆ 9.00 ರಿಂದ 9.30 ಗಂಟೆವರೆಗೆ ನಡೆದಿರುತ್ತದೆ. ಘಟನೆಯಾದ ನಂತರ ನಾವು ಆಸ್ಪತ್ರೆಗೆ ಹೋದೆವು. ನಾವು ಆಸ್ಪತ್ರೆಗೆ ಹೋದಾಗ ಸಮಯ 9.45 ಗಂಟೆಯಾಗಿತ್ತು. ಅದೇ ದಿನ ರಾತ್ರಿ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿಲ್ಲ ಎಂದರೆ ಸಾಕ್ಷಿಯು ಹೋಗಿದ್ದೆವು ಆದರೆ ದೂರನ್ನು ಮಾರನೇ ದಿನ ಬೆಳಿಗ್ಗೆ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಆಸ್ಪತ್ರೆಗೆ ಹೋದಾಗ ಆರೋಗ್ಯವಾಗಿ ಸ್ಥಿರವಾಗಿ ಇದ್ದಿರಿ ಎಂದರೆ ಸಾಕ್ಷಿಯು ಹೊಡೆದ ನೋವುಗಳು ಇದ್ದವು ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಹೋದಾಗ ಯಾರಿಂದ ನನಗೆ ಹಲ್ಲೆಯಾಗಿತ್ತು ಎಂದು ತಿಳಿಸಿರುತ್ತೇನೆ. ಘಟನೆ ನೋಡಿದ ಪ್ರತ್ಯಕ್ಷ ಸಾಕ್ಷಿಗಳು ಶೇಖರಪ್ಪ ಮತ್ತು ನಿಂಗರಾಜ. ನಾನು ಹೇಳಿದ ರೀತಿ ಶೇಕರಪ್ಪ ಹಾಗೂ ನಿಂಗರಾಜ ರವರ ಸಮಕ್ಷಮ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ನಮೂದಿಸಿದ ಆಸ್ತಿ ಸಂಖ್ಯೆ 184 ಖಾತಾ ಸಂಖ್ಯೆ 245 ಸೈಟು ಕ್ಕೆ ನಾನು ಮಾಲೀಕನಲ್ಲ ಹಾಗೂ ನನ್ನ ಸ್ವಾದೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಸಹ

ನಮ್ಮ ವಿರುದ್ಧ ಒಂದು ದೂರು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ನಾವು ಸಲ್ಲಿಸಿದ ನಂತರ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಿಂದ ಠಾಣೆಗೆ ಅರ್ಧ ಕಿ ಮೀ ಅಂತರವಿದೆ. ಘಟನಾ ಸ್ಥಳಕ್ಕೂ ಸಹ ಅರ್ಧ ಕಿ ಮೀ ಅಂತರವಿದೆ ಘಟನಾ ದಿನ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಠಾಣಾಧಿಕಾರಿಗಳು ಇರಲಿಲ್ಲ ಎಂದು ನುಡಿಯುತ್ತಾರೆ. ನಿಪಿ. 4 ರಿಂದ 6 ನ್ನು ಪೊಲೀಸರೊಂದಿಗೆ ಮಿಲಾಪೆಯಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಮಣ್ಣಿನ ಪ್ರದೇಶದಲ್ಲಿ ಗಲಾಟೆಯಾದರೆ ಅಲ್ಲಿ ಮಣ್ಣಿನ ಮೇಲೆ ಕುರುಹುಗಳು ಇರುತ್ತವೆ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳಲಾದ ಸ್ಥಳ ಮಣ್ಣಿನಿಂದ ಕೂಡಿದೆ ಎಂದರೆ ಸರಿ. ಘಟನಾ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸಾಕ್ಷಿಯು ಸದರಿ ಸ್ಥಳದಲ್ಲಿ ಹುಲ್ಲು ಬೆಳೆದಿದ್ದರಿಂದ ಯಾವುದೇ ಕುರುಹು ಇರಲಿಲ್ಲ ಎಂದು ನುಡಿಯತ್ತಾರೆ. ಘಟನೆಯ ಮಾರನೇ ದಿನ ಪಂಚನಾಮೆ ಮಾಡಿದ್ದರು. ಒಂದೇ ದಿನಕ್ಕೆ ಹುಲ್ಲು ಬೆಳೆಯುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮೊದಲೇ ಬೆಳೆದಿತ್ತು ಎಂದು ನುಡಿಯುತ್ತಾರೆ. ಘಟನಾ ಸ್ಥಳದ ಆಸ್ತಿಗೆ ನಾನು ಮಾಲೀಕನಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ಗಲಾಟೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 713/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ.01**

**ದಿನಾಂಕಃ 04.04.2026**

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ದೂರಿನಲ್ಲಿ ತೋರಿಸಿರುವ ಆಸ್ತಿ ನಾವು ದುಡಿದು ಖರೀದಿಸಿದ ಆಸ್ತಿ. ಆರೋಪಿತರು ಹಾಗೂ ನಮ್ಮ ಕುಟುಂಬಸ್ಥರು ಅಣ್ಣ ತಮ್ಮಂದಿರು. ನನ್ನ ಗಂಡ ಹಾಗೂ ಆರೋಪಿತರ ನಡುವೆ ಎಷ್ಟು ದಿವಾಣಿ ದಾವೆಗಳು ನಡೆದಿವೆ ಎಂದು ನನಗೆ ಮಾಹಿತಿ ಇಲ್ಲ. ದೂರಿನಲ್ಲಿ ತೋರಿಸಿದ ಆಸ್ತಿ ಮೂಲತಃ ಆರೋಪಿತರ ವಂಶಸ್ಥರಿಗೆ ಸೇರಿದ ಆಸ್ತಿ ಎಂದರೆ ಗೊತ್ತಿಲ್ಲ ಸಾಕ್ಷಿಯು ಅದನ್ನು ನಾವು ದುಡಿದು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ.

ನಮ್ಮ ದೂರಿನಲ್ಲಿ ಆರೋಪಿತರು ಚಪ್ಪರವನ್ನು ಹಾಕಿದ್ದರು ಎಂದು ಹೇಳಿದ್ದು ಸದರಿ ಚಪ್ಪರವನ್ನು ಘಟನೆಯ ಪೂರ್ವದಲ್ಲಿ ಎಷ್ಟು ದಿನಗಳ ಹಿಂದೆ ಹಾಕಿದ್ದರು ಎಂದರೆ ಸಾಕ್ಷಿಯು ಹಾಕಿರುವ ಸಂದರ್ಭದಲ್ಲಿ ಗಲಾಟೆಯಾಯಿತು ಎಂದು ನುಡಿಯುತ್ತಾರೆ. ನಾನು ಅವಿದ್ಯಾವಂತೆ. ನಿಪಿ.1 ನ್ನು ಠಾಣೆಯಲ್ಲಿ ಪೋಲಿಸರಿಂದ ಬರೆಸಿರುತ್ತೇನೆ. ದೂರನ್ನು ಘಟನಾ ದಿನ ಬೆಳಿಗ್ಗೆ 10.30 - 11.00 ಗಂಟೆಗೆ ನೀಡಿರುತ್ತೇನೆ. ನಾನು ಆಸ್ಪತ್ರೆಗೆ ಹೋಗಿ ಬಂದು ನಂತರ ದೂರು ನೀಡಿರುತ್ತೇನೆ. ಘಟನಾ ಕಾಲಕ್ಕೆ ಘಟನಾ ಸ್ಥಳದಲ್ಲಿ ನನ್ನ ಗಂಡ ಇದ್ದರು. ಮತ್ತೆ ಯಾರು ಯಾರು ಇದ್ದರು ಎಂದು ಗೊತ್ತಿಲ್ಲ. ನಾನು ಮನೆಯಲ್ಲಿ ಇದ್ದೆನು. ಘಟನಾ ಸ್ಥಳದಿಂದ ನಮ್ಮ ಮನೆ ಸುಮಾರು 2 ಕಿ ಮೀ ಅಂತರದಲ್ಲಿದೆ. ಘಟನೆ ಕಾಲಕ್ಕೆ ನಾನು ಮನೆಯಲ್ಲಿ ಇದ್ದೆ. ಆಗ ನಮ್ಮ ಅಕ್ಕಪಕ್ಕದ ಮನೆಯವರು ನನಗೆ ನನ್ನ ಗಂಡನನ್ನು ಸಿದ್ದಯ್ಯ, ಚನ್ನಯ್ಯ ಹಾಗೂ ಪಾರ್ವತಮ್ಮ ಹೊಡೆಯುತ್ತಿದ್ದಾರೆ ಎಂದು ನನಗೆ ತಿಳಿಸಿದರು. ನಮ್ಮ ಅಕ್ಕಪಕ್ಕದ ಮನೆಯವರು ಅಂದರೆ ನಮ್ಮ ಏರಿಯಾದವರು ತಿಳಿಸಿದರು. ಸದರಿಯವರ ಹೆಸರು ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರವನ್ನು ನಾನು ಪೊಲೀಸರಿಗೆ ತಿಳಿಸಿದ್ದೇನೆ. ನಾನು ಸ್ಥಳಕ್ಕೆ ಹೋದಾಗ ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಸಮಯ 9.00 ರಿಂದ 9.30 ಗಂಟೆಯಾಗಿತ್ತು. ಸದರಿ ಸಂದರ್ಭದಲ್ಲಿ ಸ್ಥಳದಲ್ಲಿ ಯಾರು ಯಾರು ಇದ್ದರು ಎಂದು ಅವರ ಹೆಸರು ನನಗೆ ನೆನಪಿಲ್ಲ. ಗಲಾಟೆ ಆಗುತಿರುವ ವಿಚಾರ ನನಗೆ ಬೆಳಿಗ್ಗೆ 9.00 ಗಂಟೆಗೆ ತಿಳಿದಿರುತ್ತದೆ. ನಿಮ್ಮ ಮನೆಯಿಂದ ಘಟನಾ ಸ್ಥಳಕ್ಕೆ ಬರಲು ಅರ್ಧ ಗಂಟೆ ಬೇಕು ಎಂದರೆ ಸಾಕ್ಷಿಯು ನಾನು ಬೈಕನಲ್ಲಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ಈ ಎಲ್ಲಾ ವಿಚಾರವನ್ನು ದೂರು ನೀಡುವ ಕಾಲಕ್ಕೆ ಪೊಲೀಸರಿಗೆ ತಿಳಿಸಿರುತ್ತೇನೆ. ಘಟನಾ ಸ್ಥಳದ ಸೈಟ ಅಕ್ಕಪಕ್ಕದಲ್ಲಿ ಯಾರ ಮನೆ ಎಂದರೆ ಆರೋಪಿಯ ಮನೆ ಹಾಗೂ ನಂಜಯ್ಯನವರ ಮನೆ ಇದೆ ಎಂದು ನುಡಿಯುತ್ತಾರೆ. ನಂಜಯ್ಯನವರ ಮನೆಯ ಕಾಂಪೌಂಡ ಪಕ್ಕದಲ್ಲಿ ನಮ್ಮ ಸೈಟ ಇದೆ. ಘಟನಾ ಕಾಲಕ್ಕೆ ಸದರಿಯವರ ಮನೆಯವರು ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ

ಹೋದಾಗ ಶೇಕಣ್ಣ ಮತ್ತು ನಿಂಗರಾಜ ಇದ್ದರು. ಶೇಕಣ್ಣ ಹಾಗೂ ನಿಂಗರಾಜ ರವರ ಸಂಬಂದ ನಿಮ್ಮೊಂದಿಗ ಚೆನ್ನಾಗಿದೆ ಎಂದರೆ ಸಾಕ್ಷಿಯು ದ್ವೇಷ ಇಲ್ಲ ಎಂದು ನುಡಿಯುತ್ತಾರೆ. ಇದೇ ನ್ಯಾಯಾಲಯದಲ್ಲಿ ಆರೋಪಿತರು ಸಹ ನಮ್ಮ ವಿರುದ್ದ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ನಾವು ದೂರು ನೀಡಿದ ನಂತರ ಸುಳ್ಳು ಪ್ರಕರಣ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಸುಳ್ಳು ದೂರು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ